# ನಾನೂ ಇದ್ದೇನೆ !

ಒಂದು ಸಂಸಾರದ ಸದಸ್ಯರು ಹೋಟೆಲ್ಲಿನಲ್ಲಿ ಊಟಕ್ಕಾಗಿ ಕುಳಿತಿದ್ದರು. ಪರಿಚಾರಿಕೆಯು ಮೊದಲು ದೊಡ್ಡವರ ಆರ್ಡರ್ ತೆಗೆದುಕೊಂಡು, ಬಳಿಕ ಏಳು ವರ್ಷದ ಪೋರನತ್ತ ತಿರುಗಿ, 'ನೀನೇನು ತೆಗೆದುಕೊಳ್ಳುವೆ?' ಎಂದು ಕೇಳಿದಳು.



ಹುಡುಗ ಬೆದರುತ್ತಾ ಟೇಬಲ್ಲಿನ ಸುತ್ತಲೂ ನೋಡಿ 'ನನಗೆ 'ಪಿಜ್ಜಾ ತಿನ್ನಲು ಇಷ್ಟ' ಎಂದನು. ಪರಿಚಾರಿಕೆ ಆರ್ಡರನ್ನು ಬರೆದುಕೊಳ್ಳುವ ಮೊದಲು ಅವನ ಅಮ್ಮ ಮಧ್ಯೆ ಬಾಯಿ ಹಾಕಿ, 'ಪಿಜ್ಜಾ ಬೇಡ. ಅವನಿಗೆ ರುಮಾಲಿ ರೋಟಿ ಕೊಡಿ.' ಎಂದಳು.

ಅವಳನ್ನು ಕಡೆಗಣಿಸಿದ ಪರಿಚಾರಿಕೆಯು ಹುಡುಗನನ್ನು 'ನಿನ್ನ 'ಪಿಜ್ಜಾಗೆ ಕೆಚಪ್ ಬೇಕೋ ಅಥವಾ ಸಾಸ್ ಬೇಕೋ?' ಎಂದು ಕೇಳಿದಳು.

'ಕೆಚಪ್.'

'ಒಂದು ನಿಮಿಷದಲ್ಲಿ ಬರುತ್ತದೆ' ಹೇಳಿದ ಪರಿಚಾರಿಕೆ ಅಡಿಗೆ ಮನೆಯತ್ತ ಹೊರಟಳು.

ಅವಳು ಹೋದಾಗ ಅಲ್ಲಿ ನೀರವ ನಿಶ್ಶಬ್ದ ಮೂಡಿತು. ಕೊನೆಗೆ ಅಲ್ಲಿದ್ದ ಎಲ್ಲರನ್ನೂ ನೋಡುತ್ತಾ ಹುಡುಗನು 'ಗೊತ್ತಾಯಿತೇ? ನಾನೂ ಇದ್ದೇನೆ ಎಂದು ಅವರು ಭಾವಿಸಿದ್ದಾರೆ !' ಎಂದನು.

*'ನಿಮ್ಮ ಮಕ್ಕಳು ಹೇಗಿದ್ದಾರೆ?'*
*'ಇಬ್ಬರೂ ಬಹಳ ಚೆನ್ನಾಗಿದ್ದಾರೆ. ವಂದನೆಗಳು.'*
*'ಅವರಿಗೆ ಎಷ್ಟು ವರ್ಷ?'*
*'ಡಾಕ್ಟರಿಗೆ ಮೂರು ಮತ್ತು ಲಾಯರಿಗೆ ಐದು.'*


## ಹುಚ್ಚು ಮಗು?



ಚಿಕ್ಕ ಹುಡುಗಿ ಚಂದನ ತನ್ನ ತಾಯಿಯೊಂದಿಗೆ ಬೀಚಿನಲ್ಲಿದ್ದಳು.
'ಅಮ್ಮ, ನಾನು ಮರಳಲ್ಲಿ ಆಡಬಹುದೆ?'
'ಇಲ್ಲ ಚಿನ್ನಾ, ನಿನ್ನ ಸ್ವಚ್ಛವಾಗಿರುವ ಬಟ್ಟೆಗಳನ್ನು ಕೊಳೆ ಮಾಡಿಕೊಳ್ಳುತ್ತೀಯಾ ಅಷ್ಟೆ.'
'ನಾನು ನೀರಿನಲ್ಲಿ ಆಡಬಹುದೇ?'
'ಬೇಡ, ಒದ್ದೆಯಾದರೆ ನಿನಗೆ ನೆಗಡಿಯಾಗುತ್ತದೆ.'
'ಬೇರೆ ಮಕ್ಕಳೊಡನೆ ಆಡಬಹುದೇ?'
'ಬೇಡ, ನೀನು ಗುಂಪಿನಲ್ಲಿ ಕಳೆದು ಹೋಗುವೆ.'
'ಅಮ್ಮ, ನನಗೆ ಒಂದು ಐಸ್‌ಕ್ರೀಂ ಕೊಡಿಸು.'
'ಬೇಡ, ಅದರಿಂದ ನಿನ್ನ ಗಂಟಲು ಹಾಳಾಗುತ್ತದೆ.'
ಚಿಕ್ಕ ಹುಡುಗಿ ಅಳಲು ಪ್ರಾರಂಭಿಸಿದಳು.
ತಾಯಿ ಹತ್ತಿರದಲ್ಲಿ ನಿಂತಿದ್ದ ಹೆಂಗಸಿನತ್ತ ತಿರುಗಿ ಹೇಳಿದಳು, 'ಅಯ್ಯೋ ದೇವರೆ, ಇಂತಹ ವಿಲಕ್ಷಣವಾದ ಹುಚ್ಚು ಮಗುವನ್ನು ನೀವೆಂದಾದರೂ ನೋಡಿದ್ದೀರಾ?'

## ನಾಯಿಗೆ ಮೀನೆಣ್ಣೆ

ನಾಯಿಗಳಿಗೆ ಮೀನೆಣ್ಣೆ ಒಳ್ಳೆಯದು ಎಂದು ಯಾರೋ ಹೇಳಿದರೆಂದು ಒಬ್ಬನು ತನ್ನ ಡಾಬರ್‌ಮನ್‌ಗೆ ತುಂಬಾ ಮೀನೆಣ್ಣೆಯನ್ನು ಕುಡಿಸಲಾರಂಭಿಸಿದನು. ಪ್ರತಿಭಟಿಸುತ್ತಿದ್ದ ನಾಯಿಯ ತಲೆಯನ್ನು ಪ್ರತಿದಿನವೂ ಅವನು ತನ್ನ ಮೊಣಕಾಲುಗಳ ಮಧ್ಯದಲ್ಲಿ ಹಿಡಿದುಕೊಂಡು, ಅದರ ಬಾಯನ್ನು ಬಿಡಿಸಿ, ಗಂಟಲಿಗೆ ಎಣ್ಣೆಯನ್ನು ಸುರಿಯುತ್ತಿದ್ದನು.



ಒಂದು ದಿನ ಅವನ ಹಿಡಿತದಿಂದ ತಪ್ಪಿಸಿಕೊಂಡ ನಾಯಿಯು ನೆಲದ ಮೇಲೆ ಎಣ್ಣೆಯನ್ನು ಚೆಲ್ಲಿತು. ಬಳಿಕ ಆ ವ್ಯಕ್ತಿಗೆ ಆಶ್ಚರ್ಯವಾಗುವಂತೆ ಅದು ಚಮಚವನ್ನು ನೆಕ್ಕಲು ಹಿಂತಿರುಗಿತು. ಆಗ ನಾಯಿಯು ಪ್ರತಿಭಟಿಸುತ್ತಿದ್ದುದು ಎಣ್ಣೆಯನ್ನು ಕುಡಿಸುತ್ತಿದ್ದಾನೆ ಎಂಬುದಕ್ಕಲ್ಲ, ಬದಲಾಗಿ ಅದನ್ನು ಕುಡಿಸುತ್ತಿದ್ದ ರೀತಿಗೆ ಎಂದು ಕಂಡುಹಿಡಿದನು.

## ಪ್ರಖ್ಯಾತ ದ್ವೀಪದ ವೀಕ್ಷಣೆ

ವಿಶ್ವದ ಅತಿ ಸುಂದರ ದ್ವೀಪಗಳಲ್ಲಿ ಒಂದೆಂದು ಪರಿಗಣಿಸಿದ್ದ ಸ್ಥಳದಲ್ಲಿ ಒಬ್ಬ ವೃದ್ಧನು ತನ್ನ ಬದುಕಿನ ಹೆಚ್ಚಿನ ದಿನಗಳನ್ನು ಕಳೆದಿದ್ದನು. ಅನಂತರ ಅವನು ತನ್ನ ನಿವೃತ್ತಿಯ ದಿನಗಳನ್ನು ಕಳೆಯಲು ದೊಡ್ಡ ಪಟ್ಟಣಕ್ಕೆ ಹಿಂದಿರುಗಿದ್ದನು. ಯಾರೋ ಒಬ್ಬರು ಅವನನ್ನು 'ವಿಶ್ವದ ಅದ್ಭುತಗಳಲ್ಲಿ ಒಂದೆಂದು ಪರಿಗಣಿಸಿರುವ ದ್ವೀಪದಲ್ಲಿ ಅಷ್ಟೊಂದು ವರ್ಷಗಳ ಕಾಲ ಜೀವಿಸಿರುವುದು ಅದ್ಭುತವಾಗಿರಲೇಬೇಕಲ್ಲವೇ?' ಎಂದು ಕೇಳಿದರು.

ವೃದ್ಧನು ಅದರ ಬಗ್ಗೆ ಸ್ವಲ್ಪ ಆಲೋಚಿಸಿ ಬಳಿಕ 'ಸರಿ, ನಿನಗೆ ನಿಜ ಹೇಳಬೇಕೆಂದರೆ, ಅದು ಅಷ್ಟೊಂದು ಪ್ರಖ್ಯಾತವೆಂದು ನನಗೆ ಗೊತ್ತಿದ್ದಿದ್ದರೆ, ಅದನ್ನು ನೋಡುತ್ತಿದ್ದೆನೊ ಏನೋ' ಎಂದು ಹೇಳಿದನು.

***ಹೇಗೆ ನೋಡಬೇಕೆಂದು ಜನರಿಗೆ ಪಾಠ ಕಲಿಸುವ ಅಗತ್ಯವಿಲ್ಲ. ಅಂಧರನ್ನಾಗಿಸುವ ಶಾಲೆಗಳಿಂದ ಅವರನ್ನು ಕಾಪಾಡಬೇಕಷ್ಟೆ.***

## ಚಪ್ಪಾಳೆ ತಟ್ಟುವ ದೇವದೂತ

ಒಂದು ಪ್ರಾಚೀನ ಪುರಾಣ ಕಥೆಯ ಪ್ರಕಾರ, ದೇವರು ವಿಶ್ವವನ್ನು ಸೃಜಿಸುವಾಗ, ನಾಲ್ವರು ದೇವದೂತರು ಅವನನ್ನು ಸಮೀಪಿಸಿದರು. ಮೊದಲನೆಯವನು 'ನೀನು ಅದನ್ನು ಹೇಗೆ ಮಾಡುತ್ತಿರುವೆ?' ಎಂದು ಕೇಳಿದನು. ಎರಡನೆಯವನು, 'ಅದನ್ನೇಕೆ ಮಾಡುತ್ತಿರುವೆ?' ಎಂದೂ, ಮೂರನೆಯವನು 'ನಾನು ಸಹಾಯ ಮಾಡಲೇ?' ಎಂದೂ, ನಾಲ್ಕನೆಯವನು 'ಅದರ ಬೆಲೆಯೇನು?' ಎಂದೂ ಕೇಳಿದರು.

ಮೊದಲನೆಯವನು ವಿಜ್ಞಾನಿಯಾಗಿದ್ದನು; ಎರಡನೆಯವನು ತತ್ತ್ವಜ್ಞಾನಿ, ಮೂರನೆಯವನು ಪರೋಪಕಾರಿ ಮತ್ತು ನಾಲ್ಕನೆಯವನು ರಿಯಲ್ ಎಸ್ಟೇಟ್ ಏಜೆಂಟ್ ಆಗಿದ್ದರು. ಐದನೆಯ ದೇವದೂತನು ಬೆರಗಿನಿಂದ ನೋಡುತ್ತಾ, ಆನಂದದಿಂದ ಚಪ್ಪಾಳೆ ತಟ್ಟಿದನು. ಅವನೊಬ್ಬ ಅನುಭಾವಿಯಾಗಿದ್ದನು.

## ಹುರಿದುಂಬಿಸಲು ಆಯ್ಕೆ

**ಚಪ್ಪಾಳೆ ತಟ್ಟಿ ಹುರಿದುಂಬಿಸುವವರು ಬೇಕು**



ಶಾಲೆಯ ನಾಟಕದಲ್ಲಿ ಪುಟ್ಟ ಅವನೀಶನ ಕೈಲಿ ಪಾತ್ರವೊಂದನ್ನು ಮಾಡಿಸಲು ಪ್ರಯತ್ನಿಸುತ್ತಿದ್ದರು. ಅವನು ಆ ಪಾತ್ರಕ್ಕೆ ತಾನು ಆಯ್ಕೆಯಾಗಲೇಬೇಕೆಂದು ತೀರ್ಮಾನಿಸಿದ್ದನು ಎನ್ನುವುದು ಅವನಮ್ಮನಿಗೆ ತಿಳಿದಿತ್ತು, ಅದರೆ ಒಂದು ವೇಳೆ ಅವನನ್ನು ಆಯ್ಕೆ ಮಾಡದಿದ್ದರೆ ಎಂದು ಹೆದರಿದ್ದಳು. ಪಾತ್ರಗಳ ಹಂಚಿಕೆಯಾದ ದಿನ ಶಾಲೆಯಿಂದ ಹಿಂದಿರುಗಿದ ಅವನೀಶ ತನ್ನ ತಾಯಿಯ ತೋಳಿನತ್ತ ಧಾವಿಸಿ, ಹೆಮ್ಮೆ ಮತ್ತು ಉದ್ವೇಗದಿಂದ ಕೂಗಿದನು, 'ಅಮ್ಮಾ, ಏನಾಯಿತೆಂದು ಊಹಿಸು ನೋಡೋಣ! ಚಪ್ಪಾಳೆ ಹೊಡೆದು ಹುರಿದುಂಬಿಸಲು ನಾನು ಆಯ್ಕೆಯಾಗಿದ್ದೇನೆ.'

*ಒಂದು ಮಗುವಿನ ಪ್ರಗತಿಪತ್ರದಲ್ಲಿ ಹೀಗಿತ್ತು; 'ಅನೂಪಾ ಸಮೂಹಗಾನದಲ್ಲಿ ಬಲು ಸೊಗಸಾಗಿ ಭಾಗವಹಿಸಿದ್ದಾಳೆ – ಉಪಯುಕ್ತವಾಗಿ ಆಲಿಸುವುದರ ಮೂಲಕ.'*

## ಚಂದ್ರನಲ್ಲಿ ಸಂಗ್ರಹಿಸುವ ಶಿಲೆಗಳು


ಚಂದ್ರನ ಮೇಲೆ ನಡೆದಾಡಿದ ಅನೇಕ ಮಂದಿಯಲ್ಲಿ ಒಬ್ಬನು ತಾನು ಅಲ್ಲಿದ್ದಾಗ ತನ್ನ ಕಲಾತ್ಮಕ ಭಾವನೆಗಳನ್ನು ಹೇಗೆ ನಿಗ್ರಹಿಸಬೇಕಾಯಿತೆಂದು ಹೇಳುತ್ತಿದ್ದನು.

ಭೂಮಿಯತ್ತ ಹಿಂದಿರುಗಿ ನೋಡುತ್ತಾ, ಆ ದೃಶ್ಯದಿಂದ ಆನಂದಪರವಶನಾದುದನ್ನು ಅವನು ಸ್ಮರಿಸಿದನು; ಕ್ಷಣಕಾಲ ನೆಲಕ್ಕೆ ನೆಟ್ಟಂತೆ ನಿಂತಿದ್ದ ಅವನು 'ಓಹ್, ಇದು ಅತಿ ಸುಂದರ!' ಎಂದು ಆಲೋಚಿಸಿದನು.



ಒಡನೆಯೇ ತನ್ನ ಭಾವವನ್ನು ತಡೆದು 'ನಿನ್ನ ವೇಳೆಯು ವ್ಯರ್ಥವಾಗುವುದನ್ನು ನಿಲ್ಲಿಸಿ, ಶಿಲೆಗಳನ್ನು ಸಂಗ್ರಹಿಸಲು ಹೋಗು' ಎಂದು ತನ್ನಲ್ಲಿಯೇ ಹೇಳಿಕೊಂಡನು.

*ಎರಡು ಬಗೆಯ ವಿದ್ಯಾಭ್ಯಾಸಗಳಿವೆ;*
*ಒಂದು ಜೀವನೋಪಾಯ ಮಾಡುವುದು ಹೇಗೆಂದು ಕಲಿಸುತ್ತದೆ,*
*ಮತ್ತೊಂದು ಹೇಗೆ ಬದುಕಬೇಕೆಂಬುದನ್ನು ಕಲಿಸುತ್ತದೆ.*



## ನಿಲ್ಲಿಸಲು ಮರೆತಿದ್ದೇನೆ

ವಿಶ್ವದ ಅತಿ ಶ್ರೀಮಂತ ವ್ಯಕ್ತಿಗಳಲ್ಲಿ ಒಬ್ಬನಾದ ಆಂಡ್ರ್ಯೂ ಕಾರ್ನಿಗಿಯನ್ನು ಯಾರೋ ಒಮ್ಮೆ, 'ನಿಮ್ಮ ಅಗತ್ಯಕ್ಕಿಂತ ಬಹಳ ಹೆಚ್ಚಿನದನ್ನು ಯಾವಾಗಲೂ ಹೊಂದಿದ್ದೀರಿ. ಆದ್ದರಿಂದ ನೀವು ಯಾವ ವೇಳೆಯಲ್ಲಾದರೂ ಕೆಲಸ ಮಾಡುವುದನ್ನು ನಿಲ್ಲಿಸಿಬಿಡಬಹುದಿತ್ತು. ಅಲ್ಲವೇ?' ಎಂದು ಕೇಳಿದರು.

ಅವನು ಉತ್ತರಿಸಿದನು, 'ಹೌದು, ಅದು ಸರಿ. ಆದರೆ ನಾನು ನಿಲ್ಲಿಸಲಾರೆ. ಹೇಗೆ ನಿಲ್ಲಿಸಬೇಕೆಂದು ನನಗೆ ಮರೆತು ಹೋಗಿದೆ.'


***ತಾವು ಯೋಚಿಸುವುದನ್ನು ಮತ್ತು ಆಶ್ಚರ್ಯಪಡುವುದನ್ನು ನಿಲ್ಲಿಸಿಬಿಟ್ಟರೆ, ಮತ್ತೆ ಪ್ರಾರಂಭಿಸಲು ಸಾಧ್ಯವಾಗದಿರಬಹುದು ಎಂದು ಅನೇಕರು ಹೆದರುತ್ತಾರೆ.***

## ವಿಸ್ಲರ್‌ನ ಚಿಕ್ಕ ಹುಡುಗರು

೧೮೫೦ರ ಪ್ರಾರಂಭದಲ್ಲಿ ಜೇಮ್ಸ್ ಮ್ಯಾಕ್‌ನೀಲ್ ವಿಸ್ಲರ್ ಎಂಬ ಅಮೇರಿಕಾದ ಚಿತ್ರಕಾರನು ವೆಸ್ಟ್ ಪಾಯಿಂಟ್‌ನಲ್ಲಿದ್ದ ಅಮೇರಿಕಾದ ಮಿಲಿಟರಿ ಅಕಾಡೆಮಿಯಲ್ಲಿ ಸ್ವಲ್ಪ ಸಮಯ ಇದ್ದನು. ಆಗಿನ ಒಂದು ಘಟನೆ ಹೀಗಿದೆ; ಅವನನ್ನು ಒಂದು ಸೇತುವೆಯ ಚಿತ್ರವನ್ನು ಬರೆಯಲು ನೇಮಿಸಿದಾಗ, ಅವನು ಆ ಚಿತ್ರದಲ್ಲಿ ಸೇತುವೆಯ ಜೊತೆಗೆ ಒಂದು ರಮ್ಯ ಶಿಲೆಯನ್ನು, ಹಸಿರಿನಿಂದ ತುಂಬಿದ ದಡಗಳನ್ನು ಮತ್ತು ಅಲ್ಲಿ ಮೀನು ಹಿಡಿಯುತ್ತಿದ್ದ ಇಬ್ಬರು ಚಿಕ್ಕ ಹುಡುಗರನ್ನು ಬರೆದನು. 'ಆ ಹುಡುಗರನ್ನು ಸೇತುವೆಯಿಂದ ತೆಗೆ! ಈ ಚಿತ್ರ ಇಂಜಿನಿಯರಿಂಗ್ ಉದ್ದೇಶಕ್ಕಾಗಿ' ಎಂದನು ಬೋಧಕ.



ವಿಸ್ಲರ್ ಸೇತುವೆಯಿಂದ ಆ ಮಕ್ಕಳನ್ನು ತೆಗೆದು ನದಿದಂಡೆಯಲ್ಲಿ ಮೀನು ಹಿಡಿಯುವ ಹಾಗೆ ಬರೆದು, ಚಿತ್ರವನ್ನು ಮತ್ತೆ ಸಲ್ಲಿಸಿದನು. ಕೋಪಗೊಂಡ ಬೋಧಕನು



'ಆ ಮಕ್ಕಳನ್ನು ತೆಗೆದು ಹಾಕಲು ಹೇಳಿದ್ದೆ. ಚಿತ್ರದಿಂದ ಪೂರ್ತಿಯಾಗಿ ಅವರನ್ನು ತೆಗೆದುಬಿಡು!' ಎಂದು ಕೂಗಿದನು. ಆದರೆ ವಿಸ್ಲರ್‌ನಲ್ಲಿದ್ದ ಸೃಜನಶೀಲತೆಯು ಅದಮ್ಯವಾಗಿತ್ತು. ಅವನ ಮುಂದಿನ ನಿರೂಪಣೆಯಲ್ಲಿ ಮಕ್ಕಳು 'ನಿಜಕ್ಕೂ ಚಿತ್ರದಿಂದ ಹೊರಹಾಕಲ್ಪಟ್ಟಿದ್ದರು.' ದಂಡೆಯಲ್ಲಿ ಎರಡು ಗೋರಿಕಲ್ಲುಗಳಿದ್ದು, ಅವುಗಳ ಮೇಲೆ ಹಕ್ಕಿಗಳು ಕುಳಿತಿದ್ದವು.

## ಕಳ್ಳತನದ ಕಲಿಕೆ

ತನ್ನ ತಂದೆಯು ವೃದ್ಧನಾಗುತ್ತಿರುವುದನ್ನು ಗಮನಿಸಿದ ಕನ್ನಗಳ್ಳನ ಮಗನು 'ಅಪ್ಪಾ, ನಿನ್ನ ವೃತ್ತಿಯನ್ನು ನನಗೆ ಕಲಿಸು. ನೀನು ನಿವೃತ್ತನಾದಾಗ, ನಾನು ವಂಶದ ಪೂರ್ವಾಚಾರವನ್ನು ಮುಂದುವರೆಸಬಹುದು' ಎಂದನು.

ತಂದೆ ಉತ್ತರಿಸಲಿಲ್ಲ. ಆದರೆ ಆ ರಾತ್ರಿ ಒಂದು ಮನೆಗೆ ಕನ್ನ ಹಾಕುವುದಕ್ಕೆ ತನ್ನೊಡನೆ ಹುಡುಗನನ್ನೂ ಕರೆದೊಯ್ದನು. ಒಳಗೆ ಹೋದೊಡನೆ ಅವನು ಕೋಣೆಯೊಂದರ ಬಾಗಿಲನ್ನು ತೆರೆದು ತನ್ನ ಮಗನಿಗೆ ಒಳಗೇನಿದೆಯೆಂದು ತಿಳಿಯಲು ಹೇಳಿದನು. ಹುಡುಗನು ಒಳಗೆ ಕಾಲಿಟ್ಟೊಡನೆ, ತಂದೆಯು ಬಾಗಿಲನ್ನು ದಢಾರನೆ ಮುಚ್ಚಿ ಅಗುಳಿ ಹಾಕಿದ ಶಬ್ದಕ್ಕೆ ಇಡೀ ಮನೆಯು ಎಚ್ಚೆತ್ತಿತು. ಬಳಿಕ ಅವನು ಅಲ್ಲಿಂದ ನಿಶ್ಶಬ್ದವಾಗಿ ಜಾರಿದನು.

ಕೋಣೆಯ ಒಳಗೆ ಗಾಬರಿ ಮತ್ತು ಕೋಪಗೊಂಡಿದ್ದ ಹುಡುಗನು ತಾನು ಅಲ್ಲಿಂದ ಪರಾರಿಯಾಗುವುದು ಹೇಗೆಂದು ತಿಳಿಯದೆ ದಿಗ್ಭ್ರಮೆಗೊಂಡನು. ಅವನಿಗೆ ಥಟ್ಟನೆ ಒಂದು ಉಪಾಯ ಹೊಳೆಯಿತು. ಅವನು 'ಮಿಯಾವ್' ಎಂದು ಬೆಕ್ಕಿನ ಹಾಗೆ ಶಬ್ದ ಮಾಡತೊಡಗಿದನು; ಆಗ ಒಬ್ಬ ಸೇವಕನು ಮೋಂಬತ್ತಿಯನ್ನು ಹಚ್ಚಿ ಬೆಕ್ಕು ಹೊರಹೋಗಲು ಬಾಗಿಲು ತೆರೆದನು. ಬಾಗಿಲು ತೆರೆದೊಡನೆ ಹುಡುಗನು ಹೊರಕ್ಕೆ ನೆಗೆದು ಬಂದನು. ಎಲ್ಲರೂ ಹಿಂಬಾಲಿಸಿ ಧಾವಿಸಿದರು. ರಸ್ತೆ ಬದಿಯಲ್ಲಿದ್ದ ಬಾವಿಯನ್ನು ಗಮನಿಸಿದ ಅವನು ಒಂದು ದೊಡ್ಡ ಕಲ್ಲನ್ನು ಅದರಲ್ಲಿ ಎಸೆದು, ಮರೆಯಲ್ಲಿ ಅವಿತನು.

ಅವನನ್ನು ಹಿಂಬಾಲಿಸುತ್ತಿದ್ದವರು ಕಳ್ಳನು ಮುಳುಗಿದ್ದನ್ನು ಕಾಣುವ ಆಸೆಯಿಂದ ಬಾವಿಯ ಆಳದಲ್ಲಿ ಬಗ್ಗಿ ನೋಡುತ್ತಿದ್ದಾಗ ಓಡಿಹೋದನು.

ಹುಡುಗನು ಮನೆಗೆ ಹಿಂದಿರುಗಿದಾಗ ತನ್ನ ಕಥೆಯನ್ನು ಹೇಳುವ ಆಸಕ್ತಿಯಲ್ಲಿ ಕೋಪವನ್ನು ಮರೆತುಬಿಟ್ಟಿದ್ದನು. ಆದರೆ ಅವನ ತಂದೆ ಹೇಳಿದನು, 'ನನಗೆ ಕಥೆಯನ್ನೇಕೆ ಹೇಳುವೆ? ನೀನೀಗ ಇಲ್ಲಿರುವೆ. ಅಷ್ಟು ಸಾಕು. ನೀನು ವೃತ್ತಿಯನ್ನು ಕಲಿತಿದ್ದೀಯೆ.'

## ಸಿಂಕ್ಲೇರ್ ಲಿವಿಸ್‌ನ ಬುದ್ಧಿವಾದ

*ವಿದ್ಯೆಯು ಬದುಕಿಗಾಗಿ ಮಾಡುವ ಸಿದ್ಧತೆಯಾಗಬಾರದು; ಅದು ಬದುಕಾಗಬೇಕು.*

**ವಿದ್ಯೆಯು ಬದುಕಿಗಾಗಿ ಮಾಡುವ ಸಿದ್ಧತೆಯಾಗಬಾರದು; ಅದು ಬದುಕಾಗಬೇಕು.**

ಕಾಲೇಜಿನ ವಿದ್ಯಾರ್ಥಿಗಳ ಗುಂಪೊಂದು ತಾವೆಲ್ಲರೂ ಬರಹಗಾರರಾಗಬೇಕೆಂದಿರುವ ವಿಚಾರವನ್ನು ಕಾದಂಬರಿಕಾರ ಸಿಂಕ್ಲೇರ್ ಲಿವಿಸ್‌ಗೆ ವಿವರಿಸಿ, ಅವನನ್ನು ಉಪನ್ಯಾಸ ನೀಡಬೇಕೆಂದು ಕೋರಿತು.

ಉಪನ್ಯಾಸಕ್ಕೆ ಮೊದಲು ಲಿವಿಸ್ ಕೇಳಿದನು, 'ನಿಮ್ಮಲ್ಲಿ ಎಷ್ಟು ಜನ ನಿಜಕ್ಕೂ ಬರಹಗಾರರಾಗಲು ಉದ್ದೇಶಿಸಿದ್ದೀರಿ?' ಎಲ್ಲರೂ ಕೈ ಮೇಲೆತ್ತಿದರು.



'ಹೀಗಿರುವಾಗ ನನ್ನ ಉಪನ್ಯಾಸಕ್ಕೆ ಅರ್ಥವಿಲ್ಲ. ನಿಮಗೆ ನನ್ನ ಸಲಹೆ ಇಷ್ಟೆ; ಮನೆಗೆ ಹೋಗಿರಿ ಮತ್ತು ಬರೆಯಿರಿ, ಬರೆಯಿರಿ, ಬರೆಯಿರಿ...'

ಹೀಗೆ ಹೇಳಿದವನೇ ತನ್ನ ಟಿಪ್ಪಣಿಗಳನ್ನು ಜೇಬಿಗೆ ಹಾಕಿಕೊಂಡು ಕೊಠಡಿಯಿಂದ ಹೊರಬಂದನು.

## ಮಿದುಳು ಬಳಸುವ ಅನಿವಾರ್ಯತೆ

**ಓದುವುದು ಹೇಗೆಂದು ನಿಮಗೆ ತಿಳಿಯದಿದ್ದಾಗ, ನಿಮ್ಮ ಮೆದುಳನ್ನು ಉಪಯೋಗಿಸ ಬೇಕಾಗುತ್ತದೆ**

ಒಬ್ಬ ಹೆಂಗಸು ತಾನು ಹೊಸದಾಗಿ ಕೊಂಡುಕೊಂಡ ಒಂದು ಜಟಿಲವಾದ ಸಾಮಗ್ರಿಯನ್ನು ಮಾಹಿತಿ ಕೈಪಿಡಿಯ ಸಹಾಯದಿಂದ ಜೋಡಿಸಲು ಘಂಟೆಗಟ್ಟಲೆ ಪ್ರಯತ್ನಿಸಿದಳು. ಕೊನೆಗೆ ಸೋತು ಅಡುಗೆ ಮನೆಯ ಟೇಬಲ್ಲಿನ ಮೇಲೆ ಆ ಭಾಗಗಳನ್ನು ಹಾಗೇ ಬಿಟ್ಟು ಹೊರಬಂದಳು. ಕೆಲವು ಘಂಟೆಗಳ ಬಳಿಕ ಹಿಂದಿರುಗಿದಾಗ ಅವಳಿಗಾದ ಆಶ್ಚರ್ಯವನ್ನು ಊಹಿಸಿಕೊಳ್ಳಿ. ಅವಳ ಮನೆಗೆಲಸದವಳು ಯಂತ್ರದ ಭಾಗಗಳನ್ನು ಜೋಡಿಸಿದ್ದು, ಅದು ಸಮರ್ಪಕವಾಗಿ ಕೆಲಸ ಮಾಡುತ್ತಿತ್ತು.




'ನೀನಿದನ್ನು ಹೇಗೆ ಮಾಡಿದೆ?' ಅವಳು ಉದ್ಗರಿಸಿದಳು.


'ಅಮ್ಮಾವ್ರೆ, ಓದುವುದು ಹೇಗೆಂದು ನಮಗೆ ತಿಳಿಯದಿದ್ದಾಗ, ನಮ್ಮ ಮೆದುಳನ್ನು ಉಪಯೋಗಿಸಲೇಬೇಕಾಗುತ್ತದೆ' ಎಂದು ಯಾವ ತಳಮಳವೂ ಇಲ್ಲದೆ ಕೆಲಸದವಳು ಉತ್ತರಿಸಿದಳು.

## .......... ಅಥವಾ ಕಲಿಯಲೋ?

ನಲವತ್ತೇಳು ವರ್ಷಗಳ ಕಾಲ ವರದಿಗಾರ ಹಾಗೂ ಸಂಪಾದಕರಾಗಿ ದುಡಿದು ಆಗತಾನೇ ನಿವೃತ್ತರಾಗಿದ್ದ ವ್ಯಕ್ತಿಯೊಬ್ಬರು ಸ್ಥಳೀಯ ವಿದ್ಯಾಸಂಸ್ಥೆಗೆ ಫೋನ್ ಮಾಡಿದರು. ಪತ್ರಿಕಾವೃತ್ತಿಯಲ್ಲಿ ತಮ್ಮ ಹಿನ್ನೆಲೆಯನ್ನು ವಿವರಿಸಿದ ಬಳಿಕ ತಾವು ಸ್ಥಳೀಯ ಸಾಕ್ಷರತಾ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಚ್ಛಿಸುವುದಾಗಿ ಹೇಳಿದರು.

ದೀರ್ಘ ಮೌನದ ನಂತರ ಆ ತುದಿಯಲ್ಲಿದ್ದ ಯಾರೋ ಒಬ್ಬನು ಕೇಳಿದನು, 'ಅದು ಒಳ್ಳೆಯದೇ. ಆದರೆ ನೀವು ಕಲಿಸಲು ಇಚ್ಛಿಸುವಿರೋ ಅಥವಾ ಕಲಿಯಲೋ?'

## ಕಲ್ಲಂಗಡಿ ಹಣ್ಣಿನ ಕೇಸು



ಕಲ್ಲಂಗಡಿ ಹಣ್ಣುಗಳನ್ನು ಕದ್ದ ಆಪಾದನೆಯ ಮೇಲೆ ಮೂವರು ಹುಡುಗರನ್ನು ನ್ಯಾಯಾಲಯಕ್ಕೆ ಕರೆತಂದರು. ಅವರು ಕೆಟ್ಟ ತೀರ್ಪನ್ನು ನಿರೀಕ್ಷಿಸುತ್ತಾ, ನಡುಗುತ್ತಾ ನ್ಯಾಯಾಧೀಶರನ್ನು ನೋಡಿದರು. ಏಕೆಂದರೆ ಅವರು ನಿರ್ದಾಕ್ಷಿಣ್ಯ ಮನುಷ್ಯರೆಂದು ಹೆಸರಾಗಿದ್ದರು.

ಅವರು ಬುದ್ಧಿವಂತ ಬೋಧಕರೂ ಆಗಿದ್ದರು. ತಮ್ಮ ಸುತ್ತಿಗೆಯನ್ನು ಒಮ್ಮೆ ಕುಟ್ಟಿ 'ಯಾರಾದರೂ ತಮ್ಮ ಬಾಲ್ಯದಲ್ಲಿ ಒಂದೂ ಹಣ್ಣನ್ನೂ ಕದಿಯದೇ ಇದ್ದವರು ಇಲ್ಲಿದ್ದರೆ, ತಮ್ಮ ಕೈಯನ್ನು ಮೇಲೆತ್ತಲಿ' ಎಂದು ಹೇಳಿ ಕಾದರು. ನ್ಯಾಯಾಲಯದ ಅಧಿಕಾರಿಗಳು, ಪೋಲಿಸರು, ವೀಕ್ಷಕರು ಮತ್ತು ನ್ಯಾಯಾಧೀಶರನ್ನೂ ಸೇರಿದಂತೆ ಯಾರೂ ಮೇಜಿನ ಮೇಲಿದ್ದ ತಮ್ಮ ಕೈಯ್ಯನ್ನು ಅಲುಗಿಸಲಿಲ್ಲ.

ನ್ಯಾಯಾಲಯದಲ್ಲಿದ್ದ ಒಬ್ಬರೂ ಕೈ ಎತ್ತದಿರುವುದರಿಂದ ತೃಪ್ತರಾದ ನ್ಯಾಯಾಧೀಶರು ನುಡಿದರು, 'ಕೇಸನ್ನು ವಜಾ ಮಾಡಲಾಗಿದೆ.'

## ಇಂದು-ಅಂದು

ಧಾರ್ಮಿಕ ಮನೋಭಾವದ ಹೆಂಗಸು ಯುವಪೀಳಿಗೆಯ ರೀತಿ-ನೀತಿಗಳ ಬಗ್ಗೆ ದುಃಖಿಸುತ್ತಾ, 'ಇದೆಲ್ಲಾ ಆಗಿದ್ದು ಕಾರುಗಳಿಂದ! ಇಂದು ಅವರು ನೃತ್ಯಕ್ಕೋ, ಸುತ್ತಲಿಕ್ಕೋ ಎಷ್ಟು ದೂರ ಹೋಗಬಲ್ಲರು ನೋಡಿ. ನಿಮ್ಮ ಕಾಲದಲ್ಲಿ ಹೀಗಿರಲಿಲ್ಲ. ಅಲ್ಲವೇ ಅಜ್ಜೀ?' ಎಂದಳು.

ಎಂಭತ್ತೇಳು ವರ್ಷ ವಯಸ್ಸಿನ ವೃದ್ಧೆ: 'ಅದು ಸರಿ, ನಾವು ಕೈಲಾಗುವಷ್ಟು ದೂರ ಖಂಡಿತ ನಡೆದು ಹೋಗುತ್ತಿದ್ದೆವು' ಎಂದಳು.

## ದೇವರು ಮತ್ತು ಕಜ್ಜಾಯ

ತಾಯಿ: 'ನೀನು ಅಡಿಗೆ ಮನೆಯಿಂದ ಕಜ್ಜಾಯ ಕದಿಯುವಾಗ ದೇವರು ಅಲ್ಲಿದ್ದನು ಎಂದು ನಿನಗೆ ಗೊತ್ತಿತ್ತೇ?'

'ಹೌದು.'

'ಮತ್ತು ಅವನು ಅದೇ ವೇಳೆ ನಿನ್ನನ್ನು ನೋಡುತ್ತಿದ್ದನೇ?'

'ಹೌದು.'

'ಅವನು ನಿನಗೆ ಏನು ಹೇಳುತ್ತಿದ್ದನು ಎಂದು ಭಾವಿಸಿದ್ದೀಯೆ?'

'ಅವನು ಹೇಳುತ್ತಿದ್ದನು, 'ಇಲ್ಲಿ ನಮ್ಮಿಬ್ಬರ ಹೊರತು ಬೇರೆ ಯಾರಿಲ್ಲ. ಎರಡನ್ನು ತೆಗೆದುಕೋ.'



## ಅನುಕರಿಸದ ಧರ್ಮಬೋಧಕ

ತರುಣ ಧರ್ಮಬೋಧಕನು ತನ್ನ ತಂದೆಯ ಉತ್ತರಾಧಿಕಾರಿಯಾದಾಗ, ಆತನು ತನ್ನ ತಂದೆಗಿಂತ ಹೇಗೆ ಸಂಪೂರ್ಣ ಭಿನ್ನನಾಗಿರುವನೆಂದು ಪ್ರತಿಯೊಬ್ಬರೂ ಹೇಳಲು ಪ್ರಾರಂಭಿಸಿದರು.

'ಇಲ್ಲ, ನಾನು ನನ್ನ ವೃದ್ಧ ತಂದೆಯಂತೆಯೇ ಇದ್ದೇನೆ. ಅವನು ಯಾರನ್ನೂ ಅನುಕರಿಸಲಿಲ್ಲ. ನಾನೂ ಯಾರನ್ನು ಅನುಕರಿಸುತ್ತಿಲ್ಲ' ಎಂದನು ತರುಣ.

***ನೀನು ನೀನಾಗಿರು!***
***ಮಹಾತ್ಮರ ಕ್ರಿಯೆಗೆ ಸ್ಫೂರ್ತಿಯಾದ ಅಂತಃಕರಣವನ್ನು ನೀನು ಹೊಂದಿಲ್ಲದಿದ್ದರೆ ಅವರ ನಡತೆಯನ್ನು ಅನುಕರಿಸುವ ಬಗ್ಗೆ ಎಚ್ಚರದಿಂದಿರು.***



## ರಾಜನ ಅನುಕರಣೆ

ಹ್ಯಾಂಡಲ್‌ನ 'ಮೆಸಯ್ಯ'ವನ್ನು ಮೊದಲು ಲಂಡನ್‌ನಲ್ಲಿ ಪ್ರದರ್ಶಿಸಲಾಯಿತು. ಅಲ್ಲಿಗೆ ಬಂದಿದ್ದ ರಾಜನು 'ದೇವರಿಗೆ ಜಯವಾಗಲಿ' ಎಂಬ ವೃಂದಗಾನವನ್ನು ಕೇಳುತ್ತಾ ಭಕ್ತಿಭಾವದಲ್ಲಿ ಅದೆಷ್ಟು ಮುಳುಗಿದನೆಂದರೆ ಎಲ್ಲ